E.O.No:- 363090

ದೂರವಾಣಿ ಸಂಖ್ಯೆ : 080-22212343
ಫ್ಯಾಕ್ಸ್ ಸಂಖ್ಯೆ : 080-22278803
ಅಂತರ್ಜಾಲ : www.kptcl.com

ಇ-ಮೇಲ್ ವಿಳಾಸ :director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್.) : ಯು40109ಕೆಎ1999ಎಸ್‌ಜಿಸಿ025521
ಕಂಪನಿಯ ಅಧಿಕೃತ ಕಛೇರಿ : ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009.

ಸಂಖ್ಯೆ:ಕವಿಪ್ರನಿನಿ/ಕಂ.ಕಾ/ಬಿ37/40511/2014-15 | 1157-60 ದಿನಾಂಕ :- 4 MAR 2023
ಲಗತ್ತು: ಅಧಿಸೂಚನೆಯಲ್ಲಿರುವಂತೆ

## ಅಧಿಸೂಚನೆ

ವಿಷಯ : ಕವಿಪ್ರನಿನಿಯ ಪರಿಷ್ಕೃತ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆಯ ನೀತಿಯನ್ನು ಪ್ರಕಟಿಸುವ ಬಗ್ಗೆ.

ಉಲ್ಲೇಖ: ದಿನಾಂಕ 04/08/2022 ರಂದು ಜರುಗಿದ ಕವಿಪ್ರನಿನಿ ನಿರ್ದೇಶಕರುಗಳ 132ನೇ ಮಂಡಳಿ ಸಭೆಯ ನಡವಳಿಗಳು (ವಿಷಯ ಸಂಖ್ಯೆ :135/25).

*****

ಕವಿಪ್ರನಿನಿಯು ತನ್ನ ಕಾರ್ಪೋರೇಟ್ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆಯ ನೀತಿಯನ್ನು 2014 ರಲ್ಲಿ ರಚಿಸಿರುತ್ತದೆ, ತದನಂತರ ಭಾರತ ಸರ್ಕಾರದ ಕಾರ್ಪೋರೇಟ್ ವ್ಯವಹಾರಗಳ ಸಚಿವಾಲಯವು ಸಿ.ಎಸ್.ಆರ್. ವಿಷಯಕ್ಕೆ ಸಂಬಂಧಿಸಿದಂತೆ ಕಂಪನಿಗಳ ಕಾಯ್ದೆ 2013ರಲ್ಲಿ ಹಾಗೂ ಅದರಡಿ ರೂಪಿಸಲಾದ ನಿಯಮಗಳಲ್ಲಿ ಹಲವಾರು ತಿದ್ದುಪಡಿಗಳನ್ನು ಹೊರಡಿಸಿರುತ್ತದೆ. ಈ ಹಿನ್ನಲೆಯಲ್ಲಿ ಅಸ್ತಿತ್ವದಲ್ಲಿರುವ ಕವಿಪ್ರನಿನಿಯ ಸಿ.ಎಸ್.ಆರ್ ನೀತಿಯನ್ನು ಪರಿಷ್ಕರಿಸುವ ಅವಶ್ಯಕತೆ ಇರುತ್ತದೆ.

ದಿನಾಂಕ 04/08/2022 ರಂದು ಜರುಗಿದ ಕವಿಪ್ರನಿನಿಯ ನಿರ್ದೇಶಕರುಗಳ 132ನೇ ಮಂಡಳಿ ಸಭೆಯಲ್ಲಿ ಕವಿಪ್ರನಿನಿಯ ಪರಿಷ್ಕೃತ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆಯ ನೀತಿಯನ್ನು ಅಳವಡಿಸಿಕೊಳ್ಳಲು ಅನುಮೋದನೆ ನೀಡಲಾಗಿರುತ್ತದೆ. ಅದರನ್ವಯ ಅನುಮೋದಿತ ಕವಿಪ್ರನಿನಿಯ ಪರಿಷ್ಕೃತ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆಯ ನೀತಿಯನ್ನು ಈ ಅಧಿಸೂಚನೆಯೊಡನೆ ಪ್ರಕಟಿಸಲಾಗಿದೆ.

ಮಂಡಳಿಯ ಆದೇಶದ ಮೇರೆಗೆ,

ನಿರ್ದೇಶಕರು (ಆಡಳಿತ ಮತ್ತು ಮಾ.ಸಂ.),
ಕವಿಪ್ರನಿನಿ,

ಪ್ರತಿಯನ್ನು ಅ.ಇಂ(ವಿ) (IT & MIS), ಕವಿಪ್ರನಿನಿ, ರವರಿಗೆ ಕಳುಹಿಸುತ್ತಾ ಕವಿಪ್ರನಿನಿಯ ಪರಿಷ್ಕೃತ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆಯ ನೀತಿಯನ್ನು ಕವಿಪ್ರನಿನಿಯ ವೆಬ್ ಜಾಲತಾಣ www.kptcl.karnataka.gov.in e-prasarana ನಲ್ಲಿ ಪ್ರಕಟಿಸಲು ತಿಳಿಸಲಾಗಿದೆ.

ಪ್ರತಿಯನ್ನು ಮಾಹಿತಿಗಾಗಿ:

1. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ.
2. ಕಂಪನಿ ಕಾರ್ಯದರ್ಶಿ, ಕವಿಪ್ರನಿನಿ, ನಿಗಮ ಕಾರ್ಯಾಲಯ, ಕಾವೇರಿ ಭವನ, ಬೆಂಗಳೂರು
3. ಹಿರಿಯ ಆಪ್ತ ಕಾರ್ಯದರ್ಶಿಗಳು, ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು(ಹಣಕಾಸು)/ ನಿರ್ದೇಶಕರು(ಪ್ರಸರಣ)/ ನಿರ್ದೇಶಕರು(ಆಡಳಿತ ಮತ್ತು ಮಾನವ ಸಂಪನ್ಮೂಲ) ರವರ. ಕವಿಪ್ರನಿನಿ.

## ಕನ್ನಡ ಅವತರಣಿಕೆ

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

## ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ (ಸಿ.ಎಸ್.ಆರ್) ಕಾರ್ಯನೀತಿ

### ವಿಷಯಸೂಚಿ


| ಕ್ರಮ ಸಂಖ್ಯೆ | ವಿವರಗಳು |
|---|---|
| 1. | ಹಿನ್ನೆಲೆ |
| 2. | ವ್ಯಾಖ್ಯಾನಗಳು |
| 3. | ಉದ್ದೇಶಗಳು |
| 4. | ವ್ಯಾಪ್ತಿ ಹಾಗೂ ಅರ್ಹೈಸುವಿಕೆ |
| 5. | ಆಡಳಿತ |
| 6. | ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಕಾರ್ಯಚಟುವಟಿಕೆಗಳು |
| 7. | ಸಿ.ಎಸ್.ಆರ್ ಯೋಜನೆ |
| 8. | ಸಿ.ಎಸ್.ಆರ್ ಅನುಷ್ಠಾನ |
| 9. | ಸಿ.ಎಸ್.ಆರ್ ಆಯವ್ಯಯ ಹಾಗೂ ಖರ್ಚು |
| 10. | ಮೇಲ್ವಿಚಾರಣೆ ಹಾಗೂ ಮೌಲ್ಯಮಾಪನ |
| 11. | ಸಿ.ಎಸ್ಆರ್ ಪ್ರಭಾವ ನಿರ್ಧಾರಣೆ / ಮೌಲ್ಯಮಾಪನ |
| 12. | ವರದಿ ಸಲ್ಲಿಕೆ |
| 13. | ದಾಖಲೆಗಳ ನಿರ್ವಹಣೆ |
| 14. | ಮಾಹಿತಿಯನ್ನು ಪ್ರಚುರಪಡಿಸುವಿಕೆ |
| 15. | ಲೆಕ್ಕಪತ್ರಗಳ ನಿರ್ವಹಣೆ ಹಾಗೂ ಲೆಕ್ಕಪರಿಶೋಧನೆ |

## 1.0 ಹಿನ್ನೆಲೆ:

1.1 ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿಯು ಒಂದು ಕಂಪನಿಯು ತನ್ನ ಕಾರ್ಯಾಚರಣೆಗಳನ್ನು ನಡೆಸುವ ಸಮುದಾಯ ಮತ್ತು ಪರಿಸರದ ಕಡೆಗೆ ಜವಾಬ್ದಾರಿಯ ಅಥವಾ ಹೊಣೆಗಾರಿಕೆಯ ಅರಿವಾಗಿರುತ್ತದೆ. ನೈತಿಕತೆಯಿಂದ ಕೂಡಿರುವುದು ಹಾಗೂ ಸಮಾಜದ ಆರ್ಥಿಕ ಅಭಿವೃದ್ಧಿಗಾಗಿ ವಂತಿಗೆಯನ್ನು ನೀಡುವುದು ಹಾಗೂ ಊರ್ಜಿತಗೊಳ್ಳಬಲ್ಲಂತಹ ಜೀವನೋಪಾಯ/ ಜೀವನಾಧಾರಕ್ಕಾಗಿ ಸಾಮರ್ಥ್ಯ ನಿರ್ಮಾಣ ಮಾಡುವುದು ಒಂದು ವ್ಯಾಪಾರವ್ಯವಹಾರದ ಒಂದು ಅವಿರತ ಬದ್ಧತೆಯಾಗಿರುತ್ತದೆ. ನಿಗಮವು ತನ್ನ ವ್ಯಾಪಾರವ್ಯವಹಾರವನ್ನು ಜವಾಬ್ದಾರಿಯುತವಾಗಿ, ನ್ಯಾಯಸಮ್ಮತವಾಗಿ ಹಾಗೂ ಅತ್ಯಂತ ಪಾರದರ್ಶಕ ರೀತಿಯಲ್ಲಿ ನಡೆಸುವುದರಲ್ಲಿ ನಂಬಿಕೆಯನ್ನಿಟ್ಟುಕೊಂಡಿರುವುದು. ಅದು ತನ್ನ ಸಾಮಾಜಿಕ ಉದ್ದೇಶಗಳನ್ನು ಈಡೇರಿಸುವಂತಹ ಕಾರ್ಯಚಟುವಟಿಕೆಗಳ ಒಂದು ಭಾಗವಾಗಿ ತಾನು ತನ್ನ ಕಾರ್ಯಾಚರಣೆಗಳನ್ನು ನಡೆಸುವಂತಹ ಸಮಾಜದ ಹಾಗೂ ಪರಿಸರದ ಮೇಲೆ ಒಟ್ಟಾರೆಯಾಗಿ ಒಂದು ಸಕಾರಾತ್ಮಕ ಪ್ರಭಾವವನ್ನು ತರುವ ಸಲುವಾಗಿ ಅವಿರತವಾಗಿ ಮಾರ್ಗಗಳನ್ನು ಕಂಡುಕೊಳ್ಳುತ್ತದೆ.

1.2 ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು, ರಾಜ್ಯ ಪ್ರಸರಣ ಸಂಸ್ಥೆ (ಎಸ್‌ಟಿಯು) ಯಾಗಿ ತನ್ನ ಕೇಂದ್ರಗಳ ಹಾಗೂ ವಿದ್ಯುತ್ ಪ್ರಸರಣ ಮಾರ್ಗಗಳ ಮೂಲಕ ಸಂಪೂರ್ಣ ಕರ್ನಾಟಕ ರಾಜ್ಯದಾದ್ಯಂತ ವಿದ್ಯುತ್ ಪ್ರಸರಣ ಕಾರ್ಯಚಟುವಟಿಕೆಯ ಜವಾಬ್ದಾರಿಯನ್ನು ಹೊಂದಿರುತ್ತದೆ. ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಸಾಮಾನ್ಯ ಜನತೆಗೆ ಸೇವೆ ಸಲ್ಲಿಸುವ ತನ್ನ ಪ್ರಯತ್ನದಲ್ಲಿ ಈ ಕೆಳಗಿನ ಅಂಶಗಳ ಮೂಲಕ ಸ್ಪರ್ಧಾತ್ಮಕ ದರಗಳಲ್ಲಿ ವಿಶ್ವಸನೀಯ ಗುಣಮಟ್ಟದ ವಿದ್ಯುತ್ತನ್ನು ಒದಗಿಸುವುದನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ತನ್ನ ಅಭಿಯಾನವನ್ನು ನಿರ್ದಿಷ್ಟಪಡಿಸಿಕೊಂಡಿರುವುದು.

(ಎ) ವಿದ್ಯುತ್ ಪ್ರಸರಣದಲ್ಲಿ ಅತ್ಯುತ್ತಮ ಪರಿಪಾಠಗಳನ್ನು ಪ್ರೋತ್ಸಾಹಿಸುವುದು;

(ಬಿ) ತನ್ನ ಎಲ್ಲಾ ತಾಂತ್ರಿಕ ಅನುಕೂಲತೆಗಳನ್ನು ಅತ್ಯುತ್ತಮ ರೀತಿಯಲ್ಲಿ ನಿರ್ವಹಿಸಿಕೊಂಡು ಹೋಗುವುದನ್ನು ಖಚಿತಪಡಿಸಿಕೊಳ್ಳುವುದು; ಹಾಗೂ

(ಸಿ) ಅತ್ಯುತ್ತಮ ಗುಣಮಟ್ಟಗಳ ಗ್ರಾಹಕ ಸೇವೆಗೆ ಒತ್ತು ನೀಡುವುದು.

### 1.3 ಉದ್ದೇಶಗಳು:

ಈ ಕಾರ್ಯನೀತಿಯು ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿಯನ್ನು ಒಂದು ಪ್ರಮುಖ ವ್ಯಾಪಾರವ್ಯವಹಾರ ಪ್ರಕ್ರಿಯೆಯನ್ನಾಗಿ ಮಾಡುವ ಸಲುವಾಗಿ ಮಾರ್ಗಸೂಚಿಗಳನ್ನು ರೂಪಿಸುತ್ತದೆ. ಈ ಕಾರ್ಯನೀತಿಯು ಭಾರತದಲ್ಲಿ ನಿಗಮದ ಕಾರ್ಯಚಟುವಟಿಕೆಗಳ ಸಾಮಾಜಿಕ ಮತ್ತು ಪರಿಸರೀಯ ತತ್ಪರಿಣಾಮಗಳ ಆಧಾರದ ಮೇರೆಗೆ ಸಮಾಜದ ಕ್ಷೇಮಾಭಿವೃದ್ಧಿ ಅಥವಾ ಕಲ್ಯಾಣ ಕಾರ್ಯಗಳನ್ನು ಹೆಚ್ಚಳಗೊಳಿಸುವತ್ತ ಗುರಿಯಾಗಿಸಿಕೊಂಡಿರುವುದು. ಈ ಕಾರ್ಯನೀತಿಯು ಕಂಪನಿಗಳ ಅಧಿನಿಯಮ, 2013ರ ಶೆಡ್ಯೂಲ್ VIIರ ಅನುಸಾರ ಕೈಗೆತ್ತಿಕೊಳ್ಳಬಹುದಾದ ಯೋಜನೆಗಳು ಹಾಗೂ ಕಾರ್ಯಕ್ರಮಗಳನ್ನು ನಿರ್ದಿಷ್ಟಪಡಿಸುತ್ತದೆ. ಕಾರ್ಯನೀತಿಯು ಕಾರ್ಯಗತಗೊಳಿಸುವಿಕೆ ಸಾಲುಗಳಲ್ಲಿ ಕೈಗೆತ್ತಿಕೊಳ್ಳಲು ಪ್ರಸ್ತಾಪಿಸಲಾಗಿರುವ ಯೋಜನೆಗಳು ಹಾಗೂ ಕಾರ್ಯಕ್ರಮಗಳನ್ನು ಹೊರತರುತ್ತದೆ, ಆಯ್ಕೆ ಮಾಡಿಕೊಳ್ಳಲಾದಂತಹ ಕ್ಷೇತ್ರಗಳು/ವಲಯಗಳಲ್ಲಿ ಕಾರ್ಯಗತಗೊಳಿಸುವಿಕೆಯ ರೀತಿ/ಕ್ರಮವನ್ನು ಹಾಗೂ ಕಾರ್ಯಗತಗೊಳಿಸುವಿಕೆಯ ವೇಳಾಪಟ್ಟಿಯನ್ನು ನಿರ್ದಿಷ್ಟಪಡಿಸುತ್ತದೆ. ನಿಗಮವು ವಿವಿಧ ಸಂದರ್ಭಗಳು ಹಾಗೂ ಸವಾಲುಗಳನ್ನು ಒಂದು ನಮ್ಯ ರೀತಿಯಲ್ಲಿ /ಸಂದರ್ಭಕ್ಕೆ ಸರಿಯಾಗಿ ಹೊಂದಿಕೊಳ್ಳುವ ರೀತಿಯಲ್ಲಿ ಪ್ರತಿಕ್ರಿಯೆ ನೀಡುವ ಸಲುವಾಗಿ ನಿಗಮಕ್ಕೆ ಅನುವು ಮಾಡಿಕೊಡುವ ರೀತಿಯಲ್ಲಿ ಕಾರ್ಯನೀತಿಯ ವ್ಯಾಪ್ತಿಯನ್ನು ಎಷ್ಟರಮಟ್ಟಿಗೆ ಸಾಧ್ಯವೋ ಅಷ್ಟರಮಟ್ಟಿಗೆ

ಸವಿಸ್ತೃತವಾಗಿ ಇಡಲಾಗಿರುವುದು. ಆದಾಗ್ಯೂ, ಭಾರತದ ಹೊರಗೆ ಕೈಗೆತ್ತಿಕೊಳ್ಳಲಾಗುವಂತಹ ಯಾವುದೇ ಕಾರ್ಯಚಟುವಟಿಕೆಗಳಿಗೆ ಯಾವುದೇ ಹಣಕಾಸಿನ ವಂತಿಗೆಯನ್ನು ನೀಡಲಾಗುವುದಿಲ್ಲ.

**1.4 ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಸಮಿತಿಗೆ ವಹಿಸಲಾಗಿರುವಂತಹ ಜವಾಬ್ದಾರಿಗಳು**

1.41 ಕವಿಪ್ರನಿನಿಯ ನಿರ್ದೇಶಕರುಗಳ ಮಂಡಳಿಯು ಈ ಕೆಳಗಿನ ಜವಾಬ್ದಾರಿಗಳನ್ನು ವಹಿಸುವುದರೊಂದಿಗೆ ನಿರ್ದೇಶಕರುಗಳ ಒಂದು ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ (ಸಿಎಸ್ಆರ್) ಸಮಿತಿಯನ್ನು ರಚಿಸಿರುವುದು:

ಎ) ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಕಾರ್ಯನೀತಿಯನ್ನು ರೂಪಿಸುವುದು ಹಾಗೂ ನಿರ್ದೇಶಕರುಗಳ ಮಂಡಳಿಗೆ ಶಿಫಾರಸು ಮಾಡುವುದು.

ಬಿ) ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಕಾರ್ಯನೀತಿಯ ಚಟುವಟಿಕೆಗಳ ಮೇಲೆ ಭರಿಸಬೇಕಾದ ಮೊತ್ತವನ್ನು ಶಿಫಾರಸ್ಸು ಮಾಡುವುದು;

ಸಿ) ಕಂಪನಿಯ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಕಾರ್ಯನೀತಿಯನ್ನು ಕಾಲಾನುಕಾಲಕ್ಕೆ ಮೇಲ್ವಿಚಾರಣೆ ಮಾಡುವುದು/ಸಮೀಕ್ಷಿಸುವುದು ಹಾಗೂ

ಡಿ) ಕಂಪನಿಯು ಕೈಗೆತ್ತಿಕೊಳ್ಳುವ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಯೋಜನೆಗಳು/ ಕಾರ್ಯಕ್ರಮಗಳು ಅಥವಾ ಕಾರ್ಯಚಟುವಟಿಕೆಗಳನ್ನು ಕಾರ್ಯಗತಗೊಳಿಸುವ ಸಲುವಾಗಿ ಒಂದು ಪಾರದರ್ಶಕ ವ್ಯವಸ್ಥೆಯನ್ನು ಸ್ಥಾಪಿಸುವುದು.

1.42 ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಸಮಿತಿಯು ನಿಗಮದ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಧ್ಯೇಯೋದ್ದೇಶಗಳನ್ನು ಈಡೇರಿಸಿಕೊಳ್ಳುವಲ್ಲಿ ಈ ಕೆಳಗಿನ ಪಾತ್ರವನ್ನು ವಹಿಸುತ್ತದೆ.

- ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಕಾರ್ಯಕ್ರಮಗಳ ಕಾರ್ಯಗತಗೊಳಿಸುವಿಕೆಯ ಕಡೆಗೆ ನಿಗಮವು ಕೈಗೆತ್ತಿಕೊಳ್ಳಬೇಕಾದ ಕಾರ್ಯಚಟುವಟಿಕೆಗಳನ್ನು ಸೂಚಿಸುವುದರೊಂದಿಗೆ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಕಾರ್ಯನೀತಿಯನ್ನು ರೂಪಿಸುವುದು ಹಾಗೂ ಸಮೀಕ್ಷಿಸುವುದು.
- ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಕಾರ್ಯಚಟುವಟಿಕೆಗಳ ಮೇಲೆ ಭರಿಸಬೇಕಾದ ವೆಚ್ಚದ ಮೊತ್ತವನ್ನು ಶಿಫಾರಸ್ಸು ಮಾಡುವುದು; ಹಾಗೂ
- ನಿಗಮವು ಕೈಗೆತ್ತಿಕೊಳ್ಳಲು ಪ್ರಸ್ತಾಪಿಸಿರುವ ಯೋಜನೆಗಳು / ಕಾರ್ಯಕ್ರಮಗಳು / ಕಾರ್ಯಚಟುವಟಿಕೆಗಳನ್ನು ಅನುಷ್ಠಾನಗೊಳಿಸುವುದನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಒಂದು ಪಾರದರ್ಶಕ ಮೇಲ್ವಿಚಾರಣಾ ವ್ಯವಸ್ಥೆಯನ್ನು ರೂಪಿಸುವುದು.
- ಈ ಕಾರ್ಯನೀತಿಯನ್ನು ಕಾಲಾನುಕಾಲಕ್ಕೆ ಮೇಲ್ವಿಚಾರಣೆ ಮಾಡುವುದು/ಸಮೀಕ್ಷಿಸುವುದು ಹಾಗೂ ಅನಿಷ್ಠಾನಗೊಳಿಸುವುದು.
- ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಕಾರ್ಯಚಟುವಟಿಕೆಗಳ ಸ್ಥಿತಿಗತಿಗಳ ಬಗ್ಗೆ ಹಾಗೂ ನಿಗಮವು ಮಾಡಿರುವ ವಂತಿಗೆಗಳ ಬಗ್ಗೆ ನಿರ್ದೇಶಕರುಗಳ ಮಂಡಳಿಗೆ ವಾರ್ಷಿಕ ವರದಿಯನ್ನು ಸಲ್ಲಿಸುವುದು.
- ಅಧಿನಿಯಮ ಹಾಗೂ ಅದರ ಅಡಿಯಲ್ಲಿ ರೂಪಿಸಿರುವ ನಿಯಮಗಳ ಅಡಿಯಲ್ಲಿ ಕಡ್ಡಾಯಗೊಳಿಸಿರುವ ಇತರೆ ಯಾವುದೇ ಅಗತ್ಯತೆಗಳನ್ನು ನೋಡಿಕೊಳ್ಳುವುದು.

**2.0 ವ್ಯಾಖ್ಯಾನಗಳು**

2.1 **"ಅಧಿನಿಯಮ"** ಎಂದರೆ ಕಂಪನಿಗಳ ಅಧಿನಿಯಮ, 2013 (2013ರ 18) ಹಾಗೂ ಕಂಪನಿಗಳ (ತಿದ್ದುಪಡಿ) ಅಧಿನಿಯಮ 2020 ಮುಂತಾದ ಅದರ ತದನಂತರದಲ್ಲಿ ಮಾಡಲಾಗಿರುವ ತಿದ್ದುಪಡಿಗಳು.

2.2 **"ಸಾರ್ವಜನಿಕ ಪ್ರಾಧಿಕಾರ"** ಎಂದರೆ 'ಸಾರ್ವಜನಿಕ ಪ್ರಾಧಿಕಾರ'ವನ್ನು ಮಾಹಿತಿ ಹಕ್ಕು ಅಧಿನಿಯಮ, 2005(2005ರ 22) ಪರಿಚ್ಛೇದ 2ರ ಅನುಚ್ಛೇದ (h) ರಲ್ಲಿ ವ್ಯಾಖ್ಯಾನಿಸಿದಂತೆ; "ಈ ಅನುಚ್ಛೇದವನ್ನು ಆಸ್ತಿಗಳ ವರ್ಗಾವಣೆಗೆ ಸಂಬಂಧಿಸಿದಂತೆ ಕಂಪನಿಗಳ (ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಕಾರ್ಯನೀತಿ) ತಿದ್ದುಪಡಿ ನಿಯಮಗಳು, 2021ರ ಅನುಚ್ಛೇದ ಸಂಖ್ಯೆ 7.4 (ಸಿ)ರ ಸನ್ನಿವೇಶದಲ್ಲಿ ಓದತಕ್ಕದ್ದು.

2.3 **"ಪರಿಚ್ಛೇದ"** ಎಂದರೆ ಅಧಿನಿಯಮದ ಪರಿಚ್ಛೇದ

2.4 **"ನಿಯಮಗಳು"** ಎಂದರೆ ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯವು ನೀಡಿರುವ ಹಾಗೂ ಕಾಲಾನುಕಾಲಕ್ಕೆ ತಿದ್ದುಪಡಿಗೊಂಡಿರುವ ಕಂಪನಿಗಳ (ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಕಾರ್ಯನೀತಿ) ನಿಯಮಗಳು. ಕಂಪನಿಗಳ (ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಕಾರ್ಯನೀತಿ) ನಿಯಮಗಳು, 2021ಕ್ಕೆ ತದನಂತರದಲ್ಲಿ ಮಾಡಲಾಗುವಂತಹ ಯಾವುದೇ ಪರಿಷ್ಕರಣೆಗಳನ್ನು ಕವಿಪ್ರನಿನಿಯು ಒಪ್ಪಿಕೊಳ್ಳುವುದು ಎಂಬುದಾಗಿ ಭಾವಿಸತಕ್ಕದ್ದು.

2.5 **"ನಿವ್ವಳ ಲಾಭ"** ಎಂದರೆ ಅಧಿನಿಯಮದ ಅನ್ವಯಗೊಳ್ಳುವಂತಹ ಅನುವುಗಳ ಅನುಸಾರ ತಯಾರಿಸಲಾಗಿರುವ ಒಂದು ಕಂಪನಿಯ ಹಣಕಾಸು ತ:ಖ್ತೆಗಳ ಅನುಸಾರ ನಿವ್ವಳ ಲಾಭ, ಆದರೆ

ಈ ಕೆಳಗಿನವುಗಳನ್ನು ಒಳಗೊಂಡಿರುವುದಿಲ್ಲ.

i) ಕವಿಪ್ರನಿನಿಯು ಒಂದು ಪ್ರತ್ಯೇಕ ಕಂಪನಿಯಾಗಿ ಅಥವಾ ಅನ್ಯಥಾ ರೀತಿಯಲ್ಲಿ ಕಾರ್ಯಾಚರಣೆಗೊಳ್ಳುತ್ತಿರುವ ವಿದೇಶಿ ಶಾಖೆ ಅಥವಾ ಶಾಖೆಗಳಿಂದ ಬರುವಂತಹ ಯಾವುದೇ ಲಾಭ ಹಾಗೂ

ii) ಅಂತಹ ಅನುವುಗಳನ್ನು ಅನುಸರಿಸುತ್ತಿರುವ ಭಾರತದಲ್ಲಿನ ಇತರೆ ಕಂಪನಿಗಳಿಂದ ಸ್ವೀಕರಿಸಲಾಗುವ ಯಾವುದೇ ಷೇರು ಲಾಭಾಂಶಗಳನ್ನು ಅಧಿನಿಯಮದ ಪರಿಚ್ಚೇದ 135ರ ಅನುಸಾರ;

ಅಧಿನಿಯಮದ ಪರಿಚ್ಚೇದ 135ರ ಪ್ರಕಾರ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಮೊತ್ತವನ್ನು ಅಧಿನಿಯಮದ ಪರಿಚ್ಚೇದ 198ರ ಅನುವುಗಳ ಅನುಸಾರ ಲೆಕ್ಕಹಾಕತಕ್ಕದ್ದು. ಸಾಮಾಜಿಕ ಜವಾಬ್ದಾರಿ ಮೊತ್ತವನ್ನು ಲೆಕ್ಕಹಾಕುವಲ್ಲಿ, ಉದ್ದಿಮೆಯಲ್ಲಿ ಅಥವಾ ಕಂಪನಿಯ ಯಾವುದೇ ಉದ್ದಿಮೆಗಳಲ್ಲಿ ಒಳಗೊಂಡಿರುವಂತಹ ಯಾವುದೇ ಬಂಡವಾಳ ಸ್ವರೂಪದ ಚಲಿಸಲಾಗದ ಆಸ್ತಿಗಳು ಅಥವಾ ಸ್ಥಿರಾಸ್ತಿಗಳ ಮಾರಾಟದಿಂದ ಬರುವಂತಹ ಲಾಭಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳಕೂಡದು. ಕಂಪನಿಗಳ (ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಕಾರ್ಯನೀತಿ) ನಿಯಮಗಳು, 2014ರ ನಿಯಮ 6ರ ಅನುಸಾರ, ಕಾರ್ಯನೀತಿಗಳ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಯೋಜನೆಗಳಿಂದ ಉದ್ಭವಿಸುವ ಮಿಗುತಾಯಗಳು ಕಂಪನಿಯ ವ್ಯಾಪಾರ ವ್ಯವಹಾರಗಳಿಂದ ಬರುವ ಲಾಭದ ಭಾಗವಾಗಿರುವುದಿಲ್ಲ.

2.6 ಆಡಳಿತಾತ್ಮಕ ಸಂಬಂಧಿತ ಸಾಮಾನ್ಯ ಖರ್ಚುಗಳು, ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ, ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಸಮಿತಿ, ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಕಾರ್ಯನೀತಿ, ಪ್ರಗತಿಯಲ್ಲಿರುವ ಯೋಜನೆಗಳು ಹಾಗೂ ಅಂತರಾಷ್ಟ್ರೀಯ ಸಂಸ್ಥೆ, ಈ ಪದಗಳು ಕಾಲಾನುಕಾಲಕ್ಕೆ ತಿದ್ದುಪಡಿಗೊಂಡಿರುವಂತಹ ಕಂಪನಿಗಳ ಅಧಿನಿಯಮ, 2013ರ ಅಡಿಯಲ್ಲಿ ವಿವರಿಸಿರುವಂತಹ ಅರ್ಥವನ್ನೇ ಹೊಂದಿರುತ್ತವೆ.

**3.0 ಉದ್ದೇಶಗಳು:**

ಧ್ಯೇಯೋದ್ದೇಶ, ಮಾರ್ಗೋಪಾಯಗಳು ಹಾಗೂ ಕವಿಪ್ರನಿನಿಯ ನಿರ್ದೇಶಕರುಗಳ ಮಂಡಳಿಯು ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಸಮಿತಿಯ ಶಿಫಾರಸ್ಸುಗಳನ್ನು ಪರಿಗಣಿಸುವ ಮೂಲಕ

ನೀಡಿರುವ ನಿರ್ದೇಶನಗಳು ಹಾಗೂ ಕಾರ್ಯಚಟುವಟಿಕೆಗಳನ್ನು ಆಯ್ಕೆ ಮಾಡುವುದು, ಅನುಷ್ಠಾನಗೊಳಿಸುವುದು ಹಾಗೂ ಮೇಲ್ವಿಚಾರಣೆ ಮಾಡುವುದನ್ನು ಹಾಗೂ ಅಲ್ಲದೆಯೇ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಯೋಜನೆಗಳ ವಾರ್ಷಿಕ ಕ್ರಿಯಾ ಯೋಜನೆಯನ್ನು ರೂಪಿಸುವುದು, ಅನುಷ್ಠಾನಗೊಳಿಸುವ ರೀತಿ / ಮಾದರಿ, ಕವಿಪ್ರನಿನಿಯ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಯೋಜನೆಗಳ ಕಾರ್ಯಗತಗೊಳಿಸುವಿಕೆಯ ಮೇಲ್ವಿಚಾರಣೆಗಾಗಿ ಮೇಲ್ವಿಚಾರಣಾ ವ್ಯವಸ್ಥೆ, ಇವುಗಳನ್ನು ಒಳಗೊಂಡಿರುವಂತಹ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಕಾರ್ಯನೀತಿ ಹೇಳಿಕೆಯು ಊರ್ಜಿತಗೊಳ್ಳಬಲ್ಲಂತಹ ಅಭಿವೃದ್ಧಿಯ ಕಡೆಗೆ ಗುರಿಯಾಗಿಸಿಕೊಂಡಿರುವುದು.

**4. 0 ವ್ಯಾಪ್ತಿ ಮತ್ತು ಅರ್ಥೈಸುವಿಕೆ**

4.1 ಕವಿಪ್ರನಿನಿಯು ಈ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ (ಸಿಎಸ್ಆರ್) ಕಾರ್ಯನೀತಿಯನ್ನು ಭಾರತ ಸರ್ಕಾರದ ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯವು ಅಧಿಸೂಚನೆ ಹೊರಡಿಸಿರುವಂತಹ **ಕಂಪನಿಗಳ ಅಧಿನಿಯಮ, 2013ರ (ಅಧಿನಿಯಮ) ಪರಿಚ್ಛೇದ 135**ರಲ್ಲಿ ನಿರ್ದಿಷ್ಟಪಡಿಸಿರುವಂತಹ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಚೌಕಟ್ಟಿನ ಅನುಸಾರ ಹಾಗೂ ಕಂಪನಿಗಳ (ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಕಾರ್ಯನೀತಿ) ನಿಯಮಗಳು, 2014 (ನಿಯಮಗಳು) ಹಾಗೂ ತದನಂತರದಲ್ಲಿ ತಿದ್ದುಪಡಿ ಮಾಡಲ್ಪಟ್ಟಿರುವ ನಿಯಮಗಳ ಅನುಸಾರ ಹಾಗೂ ಭಾರತ ಸರ್ಕಾರದ ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯವು ಜನವರಿ 2021ರಲ್ಲಿ ಅಧಿಸೂಚನೆ ಹೊರಡಿಸಿರುವಂತಹ ಕಂಪನಿಗಳ (ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಕಾರ್ಯನೀತಿ) ತಿದ್ದುಪಡಿ ನಿಯಮಗಳು, 2021ರ ಅನುಸಾರ ಅಭಿವೃದ್ಧಿಪಡಿಸಿರುವುದು/ರೂಪಿಸಿರುವುದು.

4.2 ಕವಿಪ್ರನಿನಿಯು ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಸಮಿತಿಯ ಶಿಫಾರಸ್ಸಿನ ಅನುಸಾರ ಕವಿಪ್ರನಿನಿಯ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಕಾರ್ಯನೀತಿಯ ಪಟ್ಟಿಯಲ್ಲಿ ಸೇರಿಸಲಾಗಿರುವ ಹಾಗೂ ಕವಿಪ್ರನಿನಿಯ ನಿರ್ದೇಶಕರುಗಳ ಮಂಡಳಿಯಿಂದ ಅನುಮೋದಿಸಲ್ಪಟ್ಟಿರುವ ಹಾಗೂ ಯಾವುದೇ ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶವನ್ನು ರಾಷ್ಟ್ರೀಯ ಮಟ್ಟದಲ್ಲಿ ಅಥವಾ ಭಾರತವು ಅಂತರಾಷ್ಟ್ರೀಯ ಮಟ್ಟದಲ್ಲಿ ಪ್ರತಿನಿಧಿಸುವ ಅದರಲ್ಲೂ ವಿಶೇಷವಾಗಿ ಜನ ಸಮುದಾಯದ ಹಾಗೂ ಪರಿಸರದ ಊರ್ಜಿತಗೊಳ್ಳಬಲ್ಲಂತಹ ಅಭಿವೃದ್ಧಿಯ ಕಡೆಗಿನ ಗುರಿಗಳು ಹೊಂದಿರುವ ಅವಕಾಶವಂಚಿತರಾಗಿರುವ, ಅನುಕೂಲತೆಗಳನ್ನು ಹೊಂದಿರದ, ಆರ್ಥಿಕವಾಗಿ ಹಿಂದುಳಿದಿರುವ ಹಾಗೂ ವಂಚಿತ ವರ್ಗದ ಭಾರತೀಯ ಕ್ರೀಡಾಪಟುಗಳಿಗೆ ತರಬೇತಿ ನೀಡುವುದನ್ನು ಹೊರತುಪಡಿಸಿದಂತೆ ಭಾರತದ ಭೌಗೋಳಿಕ ಸೀಮೆಯ ಒಳಗೆ ಮಾತ್ರ ಕಾರ್ಯಗತಗೊಳ್ಳುವಂತಹ ಎಲ್ಲಾ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಯೋಜನೆಗಳು / ಕಾರ್ಯಕ್ರಮಗಳಿಗೆ ಅನ್ವಯಗೊಳ್ಳತಕ್ಕದ್ದು.

4.3 ಈ ಕಾರ್ಯನೀತಿಯು ವ್ಯಾಪಿಸಿರದ ಯಾವುದೇ ಅಂಶವನ್ನು ಚಾಲ್ತಿಯಲ್ಲಿರುವ ಕಂಪನಿಗಳ (ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಕಾರ್ಯನೀತಿ) ತಿದ್ದುಪಡಿ ನಿಯಮಗಳು, 2021 ಹಾಗೂ ಸಿಪಿಎಸ್ಇಗಳು ಕಾರ್ಯಗತಗೊಳಿಸುವ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಕಾರ್ಯಚಟುವಟಿಕೆಗಳಿಗೆ ಸಂಬಂಧಿತ ಇತ್ತೀಚಿನ ಡಿಪಿಇ ಮಾರ್ಗಸೂಚಿಗಳ ಅನುಸಾರ ಹಾಗೂ ಈ ನಿಟ್ಟಿನಲ್ಲಿ ಯಾವುದೇ ವಿವಾದಗಳು ಸೃಷ್ಟಿಯಾದಲ್ಲಿ ಮೊದಲನೆಯದು ಎರಡನೆಯದಕ್ಕಿಂತ ಪ್ರಾಮುಖ್ಯತೆಯನ್ನು ಪಡೆಯುವುದರೊಂದಿಗೆ, ಅರ್ಥೈಸಿಕೊಳ್ಳತಕ್ಕದ್ದು.

**5.0 ಆಡಳಿತ**

5.1 ಕವಿಪ್ರನಿನಿಯ ನಿರ್ದೇಶಕರುಗಳ ಮಂಡಳಿಯು, ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಸಮಿತಿಯ ಶಿಫಾರಸ್ಸುಗಳನ್ನು ಪರಿಗಣಿಸುವ ಮೂಲಕ, ಕಾರ್ಯಚಟುವಟಿಕೆಗಳನ್ನು ಆಯ್ಕೆ ಮಾಡುವುದು, ಅನುಷ್ಠಾನಗೊಳಿಸುವುದು ಹಾಗೂ ಮೇಲ್ವಿಚಾರಣೆ ಮಾಡುವುದನ್ನು ಹಾಗೂ

ಅಲ್ಲದೆಯೇ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಯೋಜನೆಗಳ ವಾರ್ಷಿಕ ಕ್ರಿಯಾ ಯೋಜನೆಯನ್ನು ರೂಪಿಸುವುದು, ಅನುಷ್ಠಾನಗೊಳಿಸುವ ರೀತಿ / ಮಾದರಿ, ಕವಿಪ್ರನಿನಿಯ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಯೋಜನೆಗಳ ಅನುಷ್ಠಾನಗೊಳಿಸುವಿಕೆಯ ಮೇಲ್ವಿಚಾರಣೆಗಾಗಿ ಮೇಲ್ವಿಚಾರಣಾ ವ್ಯವಸ್ಥೆ, ಇವುಗಳಿಗಾಗಿ ಮಾರ್ಗಸೂಚಿ ತತ್ವಗಳನ್ನು ರೂಪಿಸುವುದು.

5.2 ಕವಿಪ್ರನಿನಿಯ ನಿರ್ದೇಶಕರುಗಳ ಮಂಡಳಿಯು, ಕವಿಪ್ರನಿನಿಯು ತನ್ನ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಬದ್ಧತೆಗಳನ್ನು ಪೂರೈಸುವ ಸಲುವಾಗಿ ಕೈಗೆತ್ತಿಕೊಳ್ಳುವ ಬಹು–ವರ್ಷಗಳ ಯೋಜನೆಗಳಿಗೂ ಅವುಗಳನ್ನು ಪ್ರಾರಂಭಿಸಿದ ಹಣಕಾಸು ಸಾಲನ್ನು ಹೊರತುಪಡಿಸಿದಂತೆ ಮೂರು ವರ್ಷಗಳನ್ನು ಮೀರದ ಕಾಲಮಿತಿಯನ್ನು ಹೊಂದಿರುವ ಹಾಗೂ ನ್ಯಾಯಸಮ್ಮತ ಸಮರ್ಥನೆಯೊಂದಿಗೆ ಒಂದು ವರ್ಷವನ್ನು ಮೀರಿದಂತೆ ಕಾಲಮಿತಿಯನ್ನು ವಿಸ್ತರಿಸಲ್ಪಟ್ಟಿರುವ ಹಾಗೂ ಪ್ರಾರಂಭಿಕವಾಗಿ ಒಂದು ಬಹು–ವರ್ಷಗಳ ಯೋಜನೆ ಎಂಬುದಾಗಿ ಅನುಮೋದಿಸಿರುವಂತಹ ಯೋಜನೆಗಳನ್ನು ಒಳಗೊಂಡಂತೆ ಅನುಮೋದನೆ ನೀಡತಕ್ಕದ್ದು.

5.3 ಪ್ರಗತಿಯಲ್ಲಿರುವ ಯೋಜನೆಗೆ ಸಂಬಂಧಿಸಿದಂತೆ, ಒಂದು ಕಂಪನಿಯ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಮೇಲ್ವಿಚಾರಣಾ ಸಮಿತಿಯು ಯೋಜನೆಯ ಅನುಷ್ಠಾನಗೊಳಿಸುವುದನ್ನು ಅನುಮೋದಿತ ಕಾಲಮಿತಿ ಹಾಗೂ ವರ್ಷವಾರು ಹಣಕಾಸಿನ ಹಂಚಿಕೆಯ ಅನುಸರಣೆಯಂತೆ ಮೇಲ್ವಿಚಾರಣೆ ಮಾಡತಕ್ಕದ್ದು ಹಾಗೂ ಯೋಜನೆಯನ್ನು ಸುಗಮವಾಗಿ ಅನುಷ್ಠಾನಗೊಳಿಸುವ ಸಲುವಾಗಿ ಅಗತ್ಯವಿದ್ದಲ್ಲಿ ಮಾರ್ಪಾಡುಗಳು ಯಾವುದದರೂ ಇದ್ದಲ್ಲಿ ಅಂತಹವುಗಳನ್ನು ಮಾಡುವ ಸಲುವಾಗಿ ಸಕ್ಷಮ ಅಧಿಕಾರವನ್ನು ಹೊಂದಿರುತ್ತದೆ.

5.4 ಕವಿಪ್ರನಿನಿಯು ನ್ಯಾಯಸಮ್ಮತ ಸಮರ್ಥನೆಯ ಆಧಾರದ ಮೇರೆಗೆ ನಿರ್ದೇಶಕರುಗಳ ಮಂಡಳಿಯ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಸಮಿತಿಯ ಶಿಫಾರಸ್ಸಿನ ಅನುಸಾರ ಹಣಕಾಸು ಸಾಲಿನ ಯಾವುದೇ ಸಮಯದಲ್ಲಿ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಕಾರ್ಯಚಟುವಟಿಕೆಗಳ ವಾರ್ಷಿಕ ಕ್ರಿಯಾ ಯೋಜನೆಯನ್ನು ಮಾರ್ಪಾಡು ಮಾಡಬಹುದು.

5.5 ನಿರ್ದೇಶಕರುಗಳ ಮಂಡಳಿ/ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಮೇಲ್ವಿಚಾರಣಾ ಸಮಿತಿಯು ಒಂದು ಹಣಕಾಸು ಸಾಲಿಗೆ ಆಡಳಿತಾತ್ಮಕ ಸಂಬಂಧಿತ ಸಾಮಾನ್ಯ ವೆಚ್ಚಗಳು ಕಂಪನಿಯ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಒಟ್ಟಾರೆ ವೆಚ್ಚಗಳ 5%ರಷ್ಟನ್ನು ಮೀರಕೂಡದು.

5.6 ಕವಿಪ್ರನಿನಿಯ ನಿರ್ದೇಶಕರುಗಳ ಮಂಡಳಿಯು ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಯೋಜನೆಗಳ ಕಾರ್ಯಗತಗೊಳಿಸುವಿಕೆಗಾಗಿ ನೀಡಿರುವ ಹಣಕಾಸನ್ನು ಅದೇ ಉದ್ದೇಶಕ್ಕಾಗಿ ಹಾಗೂ ಅದು ಅನುಮೋದಿಸಿರುವ ರೀತಿಯಲ್ಲಿಯೇ ಖರ್ಚು ಮಾಡಲಾಗಿರುವುದು ಎಂಬುದನ್ನು ಸ್ವತ: ಖಚಿತಪಡಿಸಕೊಳ್ಳತಕ್ಕದ್ದು ಹಾಗೂ ಈ ನಿಟ್ಟಿನಲ್ಲಿ ನಿರ್ದೇಶಕರು (ಹಣಕಾಸು)/ಮುಖ್ಯ ಹಣಕಾಸು ಅಧಿಕಾರಿಯವರು ಪ್ರಮಾಣೀಕರಿಸತಕ್ಕದ್ದು.

5.7 ಕವಿಪ್ರನಿನಿಯ ನಿರ್ದೇಶಕರುಗಳ ಮಂಡಳಿಯು ಅನುಮೋದಿತ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಯೋಜನೆಗಳು ಹಾಗೂ ಕಾರ್ಯಕ್ರಮಗಳ ಪ್ರಗತಿಯನ್ನು ಮೇಲ್ವಿಚಾರಣೆ ಮಾಡತಕ್ಕದ್ದು ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಸಮಿತಿ / ಕವಿಪ್ರನಿನಿಯ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಮೇಲ್ವಿಚಾರಣಾ ಸಮಿತಿಯ ಮೂಲಕ ಕಾಲಮಿತಿಗಳಿಗೆ ಸಂಬಂಧಿಸಿದಂತೆ ಪ್ರಗತಿಯನ್ನು ಮೇಲ್ವಿಚಾರಣೆ ಮಾಡತಕ್ಕದ್ದು.

5.8 ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಸಮಿತಿಯು ತನ್ನ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಕಾರ್ಯನೀತಿಯ ಅನುಸರಣೆಯಂತೆ ಒಂದು ವಾರ್ಷಿಕ ಕ್ರಿಯಾ ಯೋಜನೆಯನ್ನು ರೂಪಿಸತಕ್ಕದ್ದು ಹಾಗೂ ನಿರ್ದೇಶಕರುಗಳ ಮಂಡಳಿಗೆ ಶಿಫಾರಸ್ಸು ಮಾಡತಕ್ಕದ್ದು, ಅಂತಹ ಕ್ರಿಯಾ ಯೋಜನೆಯು ಈ

ಕೆಳಗಿನ ಅಂಶಗಳನ್ನು ಒಳಗೊಂಡಿರಬೇಕಿರುತ್ತದೆ,

(ಎ) ಅಧಿನಿಯಮದ ಶಡ್ಯೂಲ್ VIIರಲ್ಲಿ ನಿರ್ದಿಷ್ಟಪಡಿಸಲಾಗಿರುವ ಕ್ಷೇತ್ರಗಳು ಅಥವಾ ವಿಷಯಗಳಲ್ಲಿ ಕೈಗೆತ್ತಿಕೊಳ್ಳಬೇಕಾದ ಯೋಜನೆಗಳು ಅಥವಾ ಕಾರ್ಯಕ್ರಮಗಳ ಪಟ್ಟಿ

ಬಿ) ಕವಿಪ್ರನಿನಿಯು ಹಣಕಾಸಿನ ಉಪಯೋಗಕ್ಕೆ ಸಂಬಂಧಿಸಿದಂತೆ ಹಾಗೂ ಯೋಜನೆಗಳು ಅಥವಾ ಕಾರ್ಯಕ್ರಮಗಳಿಗೆ ವೇಳಾಪಟ್ಟಿ ಅನುಸರಿಸುವಂತ ಭಾರತ ಸರ್ಕಾರದ ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯವು ನೀಡಿರುವಂತಹ ಕಂಪನಿಗಳ (ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಕಾರ್ಯನೀತಿ) ತಿದ್ದುಪಡಿ ನಿಯಮಗಳು, 2021ರಲ್ಲಿರುವಂತಹ ಯೋಜನೆಗಳು ಅಥವಾ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಬೇಕಾದ ರೀತಿ/ವಿಧಾನ, ಹಾಗೂ

(ಸಿ) ಯೋಜನೆಗಳು ಹಾಗೂ ಕಾರ್ಯಕ್ರಮಗಳಿಗಾಗಿ ಹಣಕಾಸಿನ ಉಪಯೋಗದ ರೀತಿ/ವಿಧಾನ ಹಾಗೂ ಯೋಜನೆಗಳು ಮತ್ತು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವಿಕೆಯ ವೇಳಾಪಟ್ಟಿಗಳು;

(ಡಿ) ಯೋಜನೆಗಳು ಹಾಗೂ ಕಾರ್ಯಕ್ರಮಗಳ ಮೇಲ್ವಿಚಾರಣೆ ಹಾಗೂ ವರದಿ ಸಲ್ಲಿಸುವಿಕೆ ಹಾಗೂ

(ಇ) ಕವಿಪ್ರನಿನಿಯು ಕೈಗೆತ್ತಿಕೊಳ್ಳುವ ಯೋಜನೆಗಳಿಗಾಗಿ ಅಗತ್ಯತೆಯ ವಿವರಗಳು ಹಾಗೂ ಪ್ರಭಾವ ನಿರ್ಧಾರಣೆ, ಯಾವುದಾದರೂ ಇದ್ದಲ್ಲಿ; ಆದಾಗ್ಯೂ ಕವಿಪ್ರನಿನಿಯು ಒಂದು ನ್ಯಾಯಸಮ್ಮತ ಸಮರ್ಥನೆಯ ಆಧಾರದ ಮೇರೆಗೆ ನಿರ್ದೇಶಕರುಗಳ ಮಂಡಳಿಯ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಸಮಿತಿಯ ಶಿಫಾರಸ್ಸಿನ ಅನುಸಾರ ಹಣಕಾಸು ಸಾಲಿನ ಯಾವುದೇ ಸಮಯದಲ್ಲಿ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಕಾರ್ಯಚಟುವಟಿಕೆಗಳ ವಾರ್ಷಿಕ ಕ್ರಿಯಾ ಯೋಜನೆಯನ್ನು ಮಾರ್ಪಾಡು ಮಾಡಬಹುದು.

## 6.0 ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಕಾರ್ಯಚಟುವಟಿಕೆಗಳು

ಕಂಪನಿಗಳ ಅಧಿನಿಯಮ, 2013ರ ಶಡ್ಯೂಲ್ VIIರಲ್ಲಿ ಕಾಲಾನುಕಾಲಕ್ಕೆ ತಿದ್ದುಪಡಿ ಮಾಡಿರುವಂತೆ ಕಾರ್ಯಚಟುವಟಿಕೆಗಳ ಪಟ್ಟಿಯನ್ನು ಅನುವು ಮಾಡಿರುತ್ತದೆ, ಅವುಗಳನ್ನು ಕಂಪನಿಗಳು ತಮ್ಮ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಕಾರ್ಯನೀತಿಯ ಚಟುವಟಿಕೆಗಳಿಗಾಗಿ ಸೇರಿಸಿಕೊಳ್ಳಬಹುದು.

## 7.0 ಸಿಎಸ್ಆರ್ ಯೋಜನೆ

7.1 ಕಾರ್ಯಚಟುವಟಿಕೆಗಳನ್ನು ಯೋಜಿಸುವುದಕ್ಕಾಗಿ ಸಹಾಯ ಮಾಡುವ ಸಲುವಾಗಿ ಕಾರ್ಯಚಟುವಟಿಕೆಗಳ ವಿಸ್ತೃತ ವಲಯಕ್ಕಾಗಿ ವಾರ್ಷಿಕ ಕ್ರಿಯಾ ಯೋಜನೆಯ ಸೂಚಿತ ಆಯವ್ಯಯ ಹಂಚಿಕೆಯನ್ನು ಮಾಡಲಾಗುವುದು ಹಾಗೂ ಅದನ್ನು

ಎ) ಅಧಿನಿಯಮದ ಶಡ್ಯೂಲ್ VIIರಲ್ಲಿ ನಿರ್ದಿಷ್ಟಪಡಿಸಲಾಗಿರುವ ಕ್ಷೇತ್ರಗಳು ಅಥವಾ ವಿಷಯಗಳಲ್ಲಿ ಕೈಗೆತ್ತಿಕೊಳ್ಳಬೇಕಾದ ಯೋಜನೆಗಳು ಅಥವಾ ಕಾರ್ಯಕ್ರಮಗಳ ಪಟ್ಟಿ

ಬಿ) ತಿದ್ದುಪಡಿ ನಿಯಮಗಳು, 2021 (ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಕಾರ್ಯನೀತಿ) ರ ನಿಯಮ 4ರ ಉಪ-ನಿಯಮ (1) ರಲ್ಲಿ ತಿಳಿಸಿರುವಂತಹ ಯೋಜನೆಗಳು ಅಥವಾ ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸಬೇಕಾದ ರೀತಿ/ವಿಧಾನ,

ಸಿ) ಯೋಜನೆಗಳು ಹಾಗೂ ಕಾರ್ಯಕ್ರಮಗಳಿಗಾಗಿ ನಿಧಿಯ ಉಪಯೋಗದ ರೀತಿ/ವಿಧಾನ ಹಾಗೂ ಯೋಜನೆಗಳು ಮತ್ತು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವಿಕೆಯ ವೇಳಾಪಟ್ಟಿಗಳು;

ಡಿ) ಯೋಜನೆಗಳು ಹಾಗೂ ಕಾರ್ಯಕ್ರಮಗಳ ಮೇಲ್ವಿಚಾರಣೆ ಹಾಗೂ ವರದಿ ಸಲ್ಲಿಸುವಿಕೆ ಹಾಗೂ

ಇ) ಕವಿಪ್ರನಿನಿಯು ಕೈಗೆತ್ತಿಕೊಳ್ಳುವ ಯೋಜನೆಗಳಿಗಾಗಿ ಅಗತ್ಯತೆಯ ವಿವರಗಳು ಹಾಗೂ ಪ್ರಭಾವ ನಿರ್ಧಾರಣೆ, ಯಾವುದಾದರೂ ಇದ್ದಲ್ಲಿ;

7.2 ಆದಾಗ್ಯೂ ಕವಿಪ್ರನಿನಿಯು ಒಂದು ನ್ಯಾಯಸಮ್ಮತ ಸಮರ್ಥನೆಯ ಆಧಾರದ ಮೇರೆಗೆ ನಿರ್ದೇಶಕರುಗಳ ಮಂಡಳಿಯ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಸಮಿತಿಯ ಶಿಫಾರಸ್ಸಿನ

ಅನುಸಾರ ಹಣಕಾಸು ಸಾಲಿನ ಯಾವುದೇ ಸಮಯದಲ್ಲಿ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಕಾರ್ಯಚಟುವಟಿಕೆಗಳ ವಾರ್ಷಿಕ ಕ್ರಿಯಾ ಯೋಜನೆಯನ್ನು ಮಾರ್ಪಾಡು ಮಾಡಬಹುದು.

7.3 ಸವಿಸ್ತೃತವಾಗಿ, ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಚಟುವಟಿಕೆಗಳಿಗಾಗಿ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಕ್ರಿಯಾಯೋಜನೆಯು ಆರೋಗ್ಯಕರ ಪರಿಸರ; ಶಿಕ್ಷಣ, ಆರೋಗ್ಯಪಾಲನೆ ಹಾಗೂ ಪೋಷಕಾಂಶಗಳು, ಇತ್ಯಾದಿಗಳ ಮೇಲೆ ತನ್ನ ದೃಷ್ಟಿಯನ್ನು ಕೇಂದ್ರೀಕರಿಸುವುದರೊಂದಿಗೆ ಕವಿಪ್ರನಿನಿಯ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಕಾರ್ಯನೀತಿಯ ಅನುಸಾರ ಆಗಿರುತ್ತದೆ.

**8.0 ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿಯ ಅನುಷ್ಠಾನ**

8.1 ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಯೋಜನೆಗಳು ಅಥವಾ ಕಾರ್ಯಕ್ರಮಗಳನ್ನು ಸಂಸ್ಥೆಗಳ ಮೂಲಕ ಭಾರತ ಸರ್ಕಾರದ ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯವು ನೀಡಿರುವಂತಹ ಕಂಪನಿಗಳ (ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಕಾರ್ಯನೀತಿ) ತಿದ್ದುಪಡಿ ನಿಯಮಗಳು, 2021ರ ಅಡಿಯಲ್ಲಿ ನಿರ್ದಿಷ್ಟಪಡಿಸಲಾಗಿರುವ ಮಾನದಂಡಗಳನ್ನು ಪೂರೈಸುವ ಮೂಲಕ ಅನುಷ್ಠಾನಗೊಳಿಸಲಾಗುವುದು.

8.2 ಕವಿಪ್ರನಿನಿಯು ತನ್ನ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ತಂಡದ ನೈಪುಣ್ಯತೆಯನ್ನು ಬೆಳೆಸುವ ಹಾಗೂ ಅಭಿವೃದ್ಧಿಪಡಿಸುವ ಸಲುವಾಗಿ ಹಾಗೂ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿಯ ಬಗ್ಗೆ ಅರಿವಿನ ಮಟ್ಟವನ್ನು ಸಂಸ್ಥೆಯ ಒಳಗೇ ಹೆಚ್ಚಳಗೊಳಿಸುವ ಸಲುವಾಗಿ ಎಲ್ಲಾ ಕಾಲಗಳಲ್ಲಿಯೂ ತನ್ನ ಪ್ರಯತ್ನಗಳನ್ನು ಮಾಡುತ್ತಿರುವುದು ಹಾಗೂ ತನ್ನದೇ ಆದಂತಹ ಕಾರ್ಪೊರೇಟ್ ಸಾಮಾಜಿಕ ವ್ಯವಹಾರ ಸಿಬ್ಬಂದಿಯ ಸಾಮರ್ಥ್ಯ ನಿರ್ಮಾಣಕ್ಕಾಗಿ ಅಂತರಾಷ್ಟ್ರೀಯ ಸಂಸ್ಥೆಗಳನ್ನೂ ಸಹ ತೊಡಗಿಸಿಕೊಳ್ಳಬಹುದು.

**9.0 ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಆಯವ್ಯಯ ಹಾಗೂ ಖರ್ಚು**

9.1 ಪ್ರತಿಯೊಂದು ಹಣಕಾಸು ಸಾಲಿನಲ್ಲಿ, ತತ್‌ಕ್ಷಣದ ಹಿಂದಿನ ಮೂರು ಹಣಕಾಸು ಸಾಲುಗಳಲ್ಲಿ ಸಂಚಿತಗೊಂಡಂತಹ ಲಾಭದ ಸರಾಸರಿ ನಿವ್ವಳ ಲಾಭದ ಕಡೆಯ ಪಕ್ಷ ಶೇಕಡಾ ಎರಡರಷ್ಟನ್ನು (ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 198ರ ಅನುಸಾರ ಲೆಕ್ಕಹಾಕಲಾಗಿರುವುದು) ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಚಟುವಟಿಕೆಗಳು/ಯೋಜನೆಗಳು/ಕಾರ್ಯಕ್ರಮಗಳ ಮೇಲೆ ಭರಿಸಲಾಗಿರುವುದು ಎಂಬುದನ್ನು ಕವಿಪ್ರನಿನಿಯ ನಿರ್ದೇಶಕರುಗಳ ಮಂಡಳಿಯು ಖಚಿತಪಡಿಸಿಕೊಳ್ಳುತ್ತದೆ.

ಕವಿಪ್ರನಿನಿಯ ನಿರ್ದೇಶಕರುಗಳ ಮಂಡಳಿಯು ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಯೋಜನೆಗಳಿಗೆ ನೀಡಲಾದ ಹಣಕಾಸನ್ನು ಅದೇ ಉದ್ದೇಶಕ್ಕಾಗಿ ಹಾಗೂ ಅದು ಅನುಮೋದಿಸಿರುವ ರೀತಿಯಲ್ಲಿಯೇ ಖರ್ಚು ಮಾಡಲಾಗಿರುವುದು ಎಂಬುದನ್ನು ಸ್ವತ: ಖಚಿತಪಡಿಸಕೊಳ್ಳುವುದು, ಈ ನಿಟ್ಟಿನಲ್ಲಿ ನಿರ್ದೇಶಕರು (ಹಣಕಾಸು), ಇವರು ಪ್ರಮಾಣೀಕರಿಸತಕ್ಕದ್ದು.

9.2 ಒಂದು ವೇಳೆ, ಮೇಲಿನ ಕಂಡಿಕೆ 9.1ರಲ್ಲಿ ಸೂಚಿಸಲಾಗಿರುವ ಮೊತ್ತವನ್ನು ಅಂತಹ ಹಣಕಾಸು ಸಾಲಿನಲ್ಲಿ ಸಂಪೂರ್ಣವಾಗಿ ಭರಿಸಲಿಲ್ಲವಾದಲ್ಲಿ, ಅದಕ್ಕೆ ಕಾರಣಗಳನ್ನು ಅಧಿನಿಯಮದ ಪರಿಚ್ಛೇದ 134(3)(o) ಅನುಸಾರ ಪ್ರತ್ಯೇಕವಾಗಿ ತೋರಿಸತಕ್ಕದ್ದು ಹಾಗೂ ವಾರ್ಷಿಕ ವರದಿಯ ಮೂಲಕ ಮಾಹಿತಿಯನ್ನು ಹಂಚಿಕೊಳ್ಳತಕ್ಕದ್ದು ಹಾಗೂ ಖರ್ಚಾಗದೇ ಉಳಿದಿರುವ ಮೊತ್ತವನ್ನು ಕಂಪನಿಗಳ ಅಧಿನಿಯಮ, 2013ರ ಪ್ರಕಾರ ಕ್ರಮ ಕೈಗೊಳ್ಳುವುದು.

9.3 ಒಂದು ವೇಳೆ, ಕವಿಪ್ರನಿನಿಯು ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಯೋಜನೆಗಳು/ಕಾರ್ಯಕ್ರಮಗಳನ್ನು ಅನುಷ್ಠನಗೊಳಿಸುವುದರಿಂದ ಲಾಭವನ್ನು ಗಳಿಸಿದಲ್ಲಿ ವ್ಯಾಪಾರವ್ಯವಹಾರದ ಒಂದು ಭಾಗವಾಗುವುದಿಲ್ಲ, ಆದರೆ ಅದೇ ಯೋಜನೆಗೆ ಪುನ: ತೊಡಗಿಸತಕ್ಕದ್ದು ಅಥವಾ ಖರ್ಚಾಗದೇ ಉಳಿದಿರುವ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಹಣಕಾಸಿನ ಖಾತೆಗೆ ವರ್ಗಾಯಿಸತಕ್ಕದ್ದು ಅಥವಾ ಹಣಕಾಸು ಸಾಲು ಮುಕ್ತಾಯಗೊಂಡ

ದಿನಾಂಕದಿಂದ ಆರು ತಿಂಗಳುಗಳ ಅವಧಿಯ ಒಳಗೆ ಷೆಡ್ಯೂಲು VIIರಲ್ಲಿ ನಿರ್ದಿಷ್ಟಪಡಿಸಲಾಗಿರುವ ಹಣಕಾಸಿಗೆ/ನಿಧಿಗೆ ವರ್ಗಾಯಿಸತಕ್ಕದ್ದು.

9.4 ಒಂದು ವೇಳೆ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ವೆಚ್ಚವು ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 135ರ ಅನುಸಾರದ ಅಗತ್ಯತೆಗಿಂತ ಅಧಿಕವಾಗಿದ್ದಲ್ಲಿ, ಅಂತಹ ಅಧಿಕ ಮೊತ್ತವನ್ನು ಈ ಕೆಳಗಿನ ಷರತ್ತಿಗೆ ಒಳಪಟ್ಟಂತೆ ತತ್‌ಕ್ಷಣದ ಮುಂದಿನ ಮೂರು ಹಣಕಾಸು ಸಾಲುಗಳವರೆಗೆ ಅಧಿನಿಯಮದ ಪರಿಚ್ಛೇದ 135ರ ಅಗತ್ಯತೆಗಳ ಪ್ರತಿಯಾಗಿ ಹೊಂದಾಣಿಕೆ ಮಾಡಿಕೊಳ್ಳಬಹುದು.

(ಎ) ಈ ಅಧಿಕ ಪ್ರಮಾಣದ ಮೊತ್ತವು ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಯೋಜನೆಗಳ ಕಾರಣ ಉದ್ಭವಿಸುವ ಮಿಗುತಾಯಗಳನ್ನು ಒಳಗೊಂಡಿರಕೂಡದು; ಹಾಗೂ

(ಬಿ) ಕವಿಪ್ರನಿನಿಯ ನಿರ್ದೇಶಕರುಗಳ ಮಂಡಳಿಯು ಈ ನಿಟ್ಟಿನಲ್ಲಿ ಒಂದು ನಿರ್ಣಯವನ್ನು ಅನುಮೋದಿಸತಕ್ಕದ್ದು.

9.5 ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಹಣಕಾಸಿನಿಂದ ಸೃಷ್ಟಿಸಲಾದ/ಪಡೆದುಕೊಳ್ಳಲಾದ ಬಂಡವಾಳ ಆಸ್ತಿಯ ಸ್ವಾಮ್ಯವನ್ನು ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 8ರ ಅಡಿಯಲ್ಲಿ ಸ್ಥಾಪಿತವಾಗಿರುವ ಒಂದು ಕಂಪನಿಯು ಅಥವಾ ದತ್ತಿ ಉದ್ದೇಶಗಳನ್ನು ಹೊಂದಿರುವ ಹಾಗೂ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ನೋಂದಣಿ ಸಂಖ್ಯೆಯನ್ನು ಹೊಂದಿರುವ ಒಂದು ನೋಂದಾಯಿತ ಸಾರ್ವಜನಿಕ ಟ್ರಸ್ಟ್ ಅಥವಾ ನೋಂದಾಯಿತ ಸಂಘ ಅಥವಾ ಮೇಲೆ ತಿಳಿಸಲಾದ ಯೋಜನೆಯ ಫಲಾನುಭವಿಗಳು ಸ್ವ-ಸಹಾಯ ಗುಂಪುಗಳು, ತಂಡಗಳು, ಅಸ್ತಿತ್ವಗಳು/ಸಂಸ್ಥೆಗಳು ಅಥವಾ ಮಾಹಿತಿಗಾಗಿ ಹಕ್ಕು ಅಧಿನಿಯಮ, 2005ರ (2005ರ 22) ಪರಿಚ್ಛೇದ 2ರ ಷರತ್ತು (ಎಚ್) ವಿವರಿಸಿರುವಂತಹ ಒಂದು ಸಾರ್ವಜನಿಕ ಪ್ರಾಧಿಕಾರವು ಹೊಂದಿರತಕ್ಕದ್ದು.

9.6 ಬಂಡವಾಳ ಆಸ್ತಿಯ ಒಂದು ವರ್ಗಾವಣೆ ಹಾಗೂ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಆಸ್ತಿಗಳ ಕಾರ್ಯನೀತಿಯ ಊರ್ಜಿತಗೊಳ್ಳುವಿಕೆಯನ್ನು ಕವಿಪ್ರನಿನಿಯು ಎನ್‌ಐಟಿಐ ಆಯೋಗ ಹಾಗೂ ಭಾರತ ಸರ್ಕಾರದ ಸಾರ್ವಜನಿಕ ಖಾಸಗಿ ಸಹಭಾಗಿತ್ವ ಕಾರ್ಯನೀತಿಯ ಅನುಸಾರ ನಿರ್ಮಿಸು ಮತ್ತು ವರ್ಗಾಯಿಸು (ಬಿಟಿ) ವ್ಯವಸ್ಥೆಯ ಮಾರ್ಗದಲ್ಲಿ ರೂಪಿಸಲಾಗಿರುವುದು.

9.7 ಪ್ರಭಾವ ನಿರ್ಧಾರಣೆಯ ಕಡೆಗೆ ಭರಿಸಲಾಗುವ ವೆಚ್ಚವನ್ನು ಅಂತಹ/ಸಂಬಂಧಿತ ಹಣಕಾಸು ಸಾಲಿಗೆ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಕಡೆಗೆ ಖರ್ಚಿಗೆ ಹಾಕಲಾಗುವುದು, ಅದು ಅಂತಹ ಹಣಕಾಸು ಸಾಲಿನ ಒಟ್ಟಾರೆ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ವೆಚ್ಚಗಳ ಶೇಕಡಾ ಐದನ್ನು ಮೀರದಂತೆ ಅಥವಾ ಐವತ್ತು ಲಕ್ಷ ರೂಪಾಯಿಗಳು, ಇವೆರಡರಲ್ಲಿ ಯಾವುದು ಕಡಿಮೆಯೋ ಅಷ್ಟು ಮೊತ್ತವನ್ನು ಮೀರಕೂಡದು.

9.8 ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಹಣಕಾಸು/ನಿಧಿ/ಆಯವ್ಯಯದ ಕಡೆಗೆ ಇತರೆ ಕಂಪನಿಗಳಿಂದ/ಮೂಲಗಳಿಂದ ಸ್ವೀಕರಿಸಲಾಗುವ ಎಲ್ಲಾ ವಂತಿಗೆಗಳಿಗಾಗಿ, ಕವಿಪ್ರನಿನಿಯು ತನ್ನ ಸ್ವಂತ ಮೂಲಗಳಿಂದ ಅನುವು ಮಾಡಲಾದ ಹಣಕಾಸಿಗೆ ಮಾತ್ರ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ವೆಚ್ಚವನ್ನು ಕೋರುವುದು.

**10. ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ**

10.1 ಪ್ರಗತಿಯಲ್ಲಿರುವ ಯೋಜನೆಗಳಿಗೆ ಸಂಬಂಧಿಸಿದಂತೆ, ಕಂಪನಿಯ ಮೇಲ್ವಿಚಾರಣ ಸಮಿತಿಯು ಅನುಮೋದಿತ ಕಾಲಮಿತಿಗಳು ಹಾಗೂ ವರ್ಷವಾರು ಹಂಚಿಕೆಗಳ ಅನುಸಾರ ಯೋಜನೆಯ ಅನುಷ್ಠಾನಗೊಳಿಸುವಿಕೆಯನ್ನು ಮೇಲ್ವಿಚಾರಣೆ ಮಾಡುವುದು ಹಾಗೂ ಒಂದು ನ್ಯಾಯಸಮ್ಮತ

ಸಮರ್ಥನೆಯ ಆಧಾರದ ಮೇರೆಗೆ ಒಟ್ಟಾರೆ ಅನುಮತಿಸಬಲ್ಲಂತಹ ಕಾಲಮಿತಿಯ ಒಳಗೆ ಯೋಜನೆಯನ್ನು ಸುಗಮವಾಗಿ ಅನುಷ್ಠಾನಗೊಳಿಸುವ ಸಲುವಾಗಿ ಹಣಕಾಸು ಸಾಲಿನ ಯಾವುದೇ ಸಮಯದಲ್ಲಿ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಚಟುವಟಿಕೆಗಳ ವಾರ್ಷಿಕ ಕ್ರಿಯಾ ಯೋಜನೆಯನ್ನು ಮಾರ್ಪಾಡುಗಳು ಯಾವುದಾದರೂ ಇದ್ದಲ್ಲಿ ಮಾಡಬಹುದು. ಮೇಲ್ವಿಚಾರಣಾ ಸಮಿತಿಯು ಈ ಕೆಳಗಿನ ಸದಸ್ಯರುಗಳನ್ನು ಒಳಗೊಂಡಿರುತ್ತದೆ.

| ಕ್ರಮ ಸಂಖ್ಯೆ | ಸದಸ್ಯರು | ಹುದ್ದೆ |
|---|---|---|
| 1. | ನಿರ್ದೇಶಕರು (ಹಣಕಾಸು) | ಅಧ್ಯಕ್ಷರು |
| 2. | ಆರ್ಥಿಕ ಸಲಹೆಗಾರರು (ಲೆ&ಸಂ) | ಸದಸ್ಯರು |
| 3. | ಅಧೀಕ್ಷಕ ಇಂಜಿನಿಯರ್ ಸಿವಿಲ್ – ಯೋಜನಾ ಇಲಾಖೆಯಲ್ಲಿ ಬಂಡವಾಳ ಕಾಮಗಾರಿಗಳು | ಸದಸ್ಯರು |
| 4. | ಕಂಪನಿ ಕಾರ್ಯದರ್ಶಿ | ಸದಸ್ಯರು ಸಂಚಾಲಕರು |

## 11. ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿಯ ಪ್ರಭಾವ ನಿರ್ಧಾರಣೆ / ಮೌಲ್ಯಮಾಪನ

11.1 ತನ್ನ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಯೋಜನೆಗಳು / ಕಾರ್ಯಕ್ರಮಗಳ ಪ್ರಭಾವವನ್ನು ನಿರ್ಧಾರಣೆ ಮಾಡುವ ಸಲುವಾಗಿ, ಪ್ರತಿಫಲಗಳನ್ನು ಗರಿಷ್ಠಮಟ್ಟಕ್ಕೆ ತರುವುದು ಹಾಗೂ ಊರ್ಜಿತಗೊಳ್ಳುವಿಕೆ, ಯೋಜನೆಯ ಗಾತ್ರವನ್ನು ಹೆಚ್ಚಳಗೊಳಿಸುವಿಕೆ ಹಾಗೂ ಅನುಕರಣೀಯತೆಯನ್ನು ಅಂತರ್ಗತಗೊಳಿಸುವ ಸಲುವಾಗಿ, ಕವಿಪ್ರನಿನಿಯು ಈ ಕೆಳಗಿನ ಚಟುವಟಿಕೆಗಳನ್ನು ಕೈಗೆತ್ತಿಕೊಳ್ಳತಕ್ಕದ್ದು.

- ಎಲ್ಲೆಲ್ಲಿ ಸಾಧ್ಯವೋ ಅಂತಹ ಕಡೆಗಳಲ್ಲಿ, ಯೋಜನೆಗಳು ಪ್ರಾರಂಭಗೊಳ್ಳುವ ಮೊದಲಿನ ಮೂಲ ಮಾಹಿತಿ ಸಂಗ್ರಹಿಸತಕ್ಕದ್ದು.
- ಸಾಧ್ಯವಾದಷ್ಟು ಮಟ್ಟಿಗೆ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಯೋಜನೆಗಳ ಪ್ರಭಾವವನ್ನು ನಿರ್ಧಾರಣೆ ಮಾಡುವ ಸಲುವಾಗಿ ಅರೆ ಪ್ರಾಯೋಗಿಕ ಸಂಶೋಧನಾ ವಿನ್ಯಾಸವನ್ನು ಉಪಯೋಗಿಸಿಕೊಳ್ಳಲಾಗುವುದು.
- ಒಂದು ಸ್ವತಂತ್ರ ಸಂಸ್ಥೆಯ ಮೂಲಕ ರೂಪಾಯಿಗಳು ಒಂದು ಕೋಟಿಗೂ ಅಧಿಕ ಖರ್ಚನ್ನು ಒಳಗೊಂಡಿರುವಂತಹ ಹಾಗೂ ಪ್ರಭಾವ ಅಧ್ಯಯನವನ್ನು ಕೈಗೊಳ್ಳುವುದಕ್ಕೆ ಮುಂಚಿತವಾಗಿ ಒಂದು ವರ್ಷಕ್ಕೆ ಕಡಿಮೆ ಇಲ್ಲದ ಅವಧಿಗೆ ಮುಂಚೆ ಪೂರ್ಣಗೊಂಡಿರುವಂತಹ ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಯೋಜನೆಗಳ ಪ್ರಭಾವ ನಿರ್ಧಾರಣೆಯನ್ನು ಮಾಡತಕ್ಕದ್ದು.
- ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಯೋಜನೆಗಳ ಮೇಲಿನ ಪ್ರಭಾವ ನಿರ್ಧಾರಣಾ ವರದಿಗಳನ್ನು ನಿರ್ದೇಶಕರುಗಳ ಮಂಡಳಿಯ ಮುಂದೆ ಮಂಡಿಸುವುದು ಹಾಗೂ ಅವುಗಳನ್ನು ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಮೇಲಿನ ವಾರ್ಷಿಕ ವರದಿಗೆ ಅನುಬಂಧವಾಗಿ ಲಗತ್ತಿಸುವುದು.

## 12. ವರದಿ ಸಲ್ಲಿಕೆ

12.1 ಕವಿಪ್ರನಿನಿಯು ಹಿಂದಿನ ಸಾಲಿನಲ್ಲಿ ಕೈಗೆತ್ತಿಕೊಳ್ಳಲಾಗಿದ್ದಂತ ತನ್ನ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಯೋಜನೆಗಳು / ಕಾರ್ಯಕ್ರಮಗಳ ಒಂದು ಸಂಪೂರ್ಣ ವರದಿಯನ್ನು ಅಧಿನಿಯಮದ ಪರಿಚ್ಛೇದ 134(3)(o) ಅನುಸಾರ ರೂಪಿಸಲಾಗಿರುವಂತಹ ಕಂಪನಿಗಳ (ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಕಾರ್ಯನೀತಿ) ತಿದ್ದುಪಡಿ ನಿಯಮಗಳು, 2021ರಲ್ಲಿ ನಿರ್ದೇಶಕರುಗಳ ಮಂಡಳಿಯ ವರದಿಯಲ್ಲಿ ಸೇರಿಸಬೇಕಿರುವ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಚಟುವಟಿಕೆಗಳ ಮೇಲೆ ವಾರ್ಷಿಕ ವರದಿಗಾಗಿ ನಿರ್ದಿಷ್ಟಪಡಿಸಲಾಗಿರುವ ನಮೂನೆಯಲ್ಲಿ ಮಾಡುವುದು.

**13. ದಾಖಲೆಗಳನ್ನು ನಿರ್ವಹಿಸುವುದು**

13.1 ಕವಿಪ್ರನಿನಿಯು ಎಲ್ಲಾ ಯೋಜನೆಗಳು/ಕಾರ್ಯಕ್ರಮಗಳಿಗಾಗಿ ಒಂದು ಪರಿಣಾಮಕಾರಿತ್ವದಿಂದ ಕೂಡಿದ ದಾಖಲೆಗಳ ನಿರ್ವಹಣೆಗಾಗಿ ಎಲ್ಲಾ ಕಾಲಗಳಲ್ಲಿಯೂ ಒತ್ತು ನೀಡುತ್ತಿರುವುದು. ಸಮಗ್ರ ದಾಖಲೆಗಳ ನಿರ್ವಹಣೆಯು ಮುದ್ರಿತ ಸಾಮಗ್ರಿಗಳು, ಶ್ರವಣ/ಆಡಿಯೋ ರಿಕಾರ್ಡುಗಳು, ದೃಶ್ಯ ಮಾಧ್ಯಮ/ವಿಡಿಯೋ ರಿಕಾರ್ಡುಗಳು, ಇತ್ಯಾದಿಗಳನ್ನು ಒಳಗೊಂಡಿರುವುದು.

13.2 ಅಲ್ಲದೇಯೇ, ಯೋಜನೆಯನ್ನು ಪೂರ್ಣಗೊಳಿಸಿರುವುದಕ್ಕೆ ಸಂಬಂಧಿತ ವರದಿಯು ಪ್ರಮುಖ ಯೋಜನಾ ಪರಿಮಿತಿಗಳು, ಅನುಷ್ಠಾನಗೊಳಿಸುವಿಕೆ ಪ್ರಕ್ರಿಯೆ, ಚಿಂತಿಸಲಾಗಿರುವಂತಹ ಪ್ರತಿಫಲಗಳು ಹಾಗೂ ಯೋಜನೆ/ಕಾರ್ಯಕ್ರಮಗಳು ಮುಕ್ತಾಯಗೊಂಡ ನಂತರದ ಮಾಹಿತಿಯೊಂದಿಗೆ ಸಾಧಿಸಲಾದ ಫಲಿತಾಂಶಗಳು ಹಾಗೂ ಯೋಜನೆಯ ಗಾತ್ರದ ವಿಸ್ತರಣಾ ಸಾಧ್ಯತೆ ಹಾಗೂ ಅದನ್ನು ಮಾದರಿಯಾಗಿ ಅನುಸರಿಸಬಹುದಾದ ಸಾಧ್ಯತೆಯನ್ನು ಎಲ್ಲೆಲ್ಲಿ ಸಾಧ್ಯವೋ ಅಂತಹ ಕಡೆಗಳಲ್ಲಿ ಅಭಿವೃದ್ಧಿ ಪಡಿಸುವುದು.

13.3 ಯೋಜನೆಯನ್ನು ಕಾರ್ಯಗತಗೊಳಿಸುವ ವೇಳೆಯಲ್ಲಿ ಪಡೆದುಕೊಳ್ಳಲಾದ ಎಲ್ಲಾ ಮಾಹಿತಿಯನ್ನು ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಇಲಾಖೆಯು ದಾಖಲೆಗಳಲ್ಲಿ ಸಂಗ್ರಹಿಸಿಡುವುದು

**14. ಮಾಹಿತಿಯನ್ನು ಪ್ರಚುರಪಡಿಸುವಿಕೆ**

14.1 ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಸಮಿತಿಯು ಕಡೆಯ ಪಕ್ಷ ವಾರ್ಷಿಕ ಆಧಾರದ ಮೇರೆಗೆ ನಿಗಮವು ಕೈಗೆತ್ತಿಕೊಂಡಿರುವ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಯೋಜನೆಗಳು / ಚಟುವಟಿಕೆಗಳ ಸ್ಥಿತಿಗತಿಯ ಬಗ್ಗೆ ಅಂತಹ ಯೋಜನೆಗಳು/ಚಟುವಟಿಕೆಗಳು ಬೀರಿರುವಂತಹ ಪ್ರಭಾವದ ಮೇಲಿನ ವರದಿಯೊಂದಿಗೆ ನಿರ್ದೇಶಕರುಗಳ ಮಂಡಳಿಗೆ ವರದಿಯನ್ನು ಸಲ್ಲಿಸತಕ್ಕದ್ದು.

14.2 ನಿಗಮವು ಈ ಕಾರ್ಯನೀತಿಯನ್ನು ನಿಗಮದ ಜಾಲತಾಣ www.kptcl.com/ePrasarana ದಲ್ಲಿ ಅಪ್ಲೋಡ್ ಮಾಡತಕ್ಕದ್ದು. ಮುಂದುವರೆದು, ನಿಗಮವು ಅನುಷಾನಗೊಳಿಸಿದ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಚಟುವಟಿಕೆಗಳ ಮೇಲೆ ಒಂದು ಸವಿವರ ಸ್ಥಿತಿಗತಿಯ ವರದಿಯನ್ನು ಪ್ರತೀ ವರ್ಷವೂ ವಾರ್ಷಿಕ ವರದಿಯಲ್ಲಿ ನಿರ್ದೇಶಕರುಗಳ ವರದಿಯಲ್ಲಿ ಬಹಿರಂಗಪಡಿಸಲಾಗುವುದು. ಈ ಮಾಹಿತಿಯನ್ನು ಸಹ ನಿಗಮದ ಜಾಲತಾಣ www.kptcl.com/ ePrasarana ದಲ್ಲಿ ಅಪ್ಲೋಡ್ ಮಾಡತಕ್ಕದ್ದು.

14.3 ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಧ್ಯೇಯೋದ್ದೇಶಗಳ ಅನುಸರಣೆಯಂತೆ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಕಾರ್ಯನೀತಿಯ ಅನುಷಾನಗೊಳಿಸುವಿಕೆ ಹಾಗೂ ಅದರ ಮೇಲ್ವಿಚಾರಣೆಯನ್ನು ತತ್ವಶಃ ಮಾಡಲಾಗಿದೆ ಎಂಬುದಾಗಿ ತಿಳಿಸಿ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಸಮಿತಿಯು ವಾರ್ಷಿಕ ವರದಿಯಲ್ಲಿ ಒಂದು ಜವಾಬ್ದಾರಿಯುತ ಹೇಳಿಕೆಯನ್ನು ನೀಡತಕ್ಕದ್ದು.

**15. ಲೆಕ್ಕಪತ್ರಗಳ ನಿರ್ವಹಣೆ ಹಾಗೂ ಲೆಕ್ಕಪರಿಶೋಧನೆ**

ಕವಿಪ್ರನಿನಿಯು ಭಾರತ ಸರ್ಕಾರದ ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯವು ಅನುಮೋದಿಸಿರುವಂತಹ ಲೆಕ್ಕವನ್ನಿಡುವಿಕೆ ಹಾಗೂ ಲೆಕ್ಕಪರಿಶೋಧನಾ ಮಾರ್ಗಸೂಚಿಗಳ ಮೇಲಿನ ಟಿಪ್ಪಣಿ / ಪ್ರಮಾಣಕಗಳು ಯಾವುದಾದರೂ ಇದ್ದಲ್ಲಿ, ಅವುಗಳನ್ನು ಅನುಸರಿಸುವುದು.